# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 296 |
| ಉತ್ತರಿಸಬೇಕಾದ ದಿನಾಂಕ | : | 11.12.2024 |
| ಉತ್ತರಿಸಬೇಕಾದ ಸಚಿವರು | : | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಿಂದ ಇಲ್ಲಿಯವರೆಗೂ ಕರ್ನಾಟಕ ಗೃಹ ಮಂಡಳಿಯು ಎಷ್ಟು ಇಲಾಖೆಗಳಿಗೆ ನಗರಸಭೆ, ಪುರಸಭೆಗಳಲ್ಲಿ ಕಟ್ಟಡ ಹಾಗೂ ಇನ್ನಿತರ ಕಾಮಗಾರಿಗಳನ್ನು ಮಾಡಲು ಗುತ್ತಿಗೆಯನ್ನು ಪಡೆದುಕೊಳ್ಳಲಾಗಿದೆ. ಪಡೆದಿರುವ ಗುತ್ತಿಗೆಯಲ್ಲಿ ಇದುವರೆಗೂ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿದೆ; ಎಷ್ಟು ಬಾಕಿ ಉಳಿದುಕೊಂಡಿದೆ ; | ಕರ್ನಾಟಕ ಗೃಹ ಮಂಡಳಿಯಿಂದ 2019-20 ರಿಂದ 2023-24 ರವರೆಗೆ ಠೇವಣಿವಂತಿಕೆ ಆಧಾರದಡಿ ವಿವಿಧ ಇಲಾಖೆಗಳ 488 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, 326 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೂ 162 ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ. |
| ಆ) | ಗೃಹ ಮಂಡಳಿ ವತಿಯಿಂದ ಕಾಮಗಾರಿಗಳನ್ನು ಸ್ವಾತಂತ್ರವಾಗಿ ಕೈಗೊಳ್ಳಲು ಹೊಂದಿರುವ ಮೂಲ ಸೌಕರ್ಯಗಳೇನು ; (ತಾಂತ್ರಿಕ ಸಿಬ್ಬಂದಿ ಮತ್ತು ಯಂತ್ರೋಪಕರಣಗಳ ಮಾಹಿತಿ ಒದಗಿಸುವುದು) | ಕರ್ನಾಟಕ ಗೃಹ ಮಂಡಳಿಯಲ್ಲಿ ಇರುವ ತಾಂತ್ರಿಕ ಸಿಬ್ಬಂದಿಗಳ ವಿವರ ಈ ಕೆಳಕಂಡಂತಿದೆ.<br>1. ಮುಖ್ಯ ಅಭಿಯಂತರರು- 1<br>2. ಅಧೀಕ್ಷಕ ಅಭಿಯಂತರರು – 2<br>3. ಕಾರ್ಯಪಾಲಕ ಅಭಿಯಂತರರು- 16<br>4. ಸಹಾಯಕ ಕಾರ್ಯಪಾಲಕ ಅಭಿಯಂತರರು- 44<br>5. ಸಹಾಯಕ/ಕಿರಿಯ ಅಭಿಯಂತರರು – 103<br>6. ನಗರ ಯೋಜನಾ ಶಾಖೆ – 03<br>ಟೆಂಡರ್ ನಿಯಮಾವಳಿಯಂತೆ ಯಂತ್ರೋಪಕರಣಗಳನ್ನು ಹೊಂದಿರುವ ಗುತ್ತಿಗೆದಾರರಿಗೆ ಗುತ್ತಿಗೆಯನ್ನು ವಹಿಸಲಾಗುವುದು. |
| ಇ) | ಕರ್ನಾಟಕ ಗೃಹ ಮಂಡಳಿಯು ಗುತ್ತಿಗೆಯನ್ನು ಪಡೆದ ನಂತರ ಬೇರೆ ಏಜೆನ್ಸಿಗೆ ಹೊರಗುತ್ತಿಗೆ ನೀಡಿ ಕಾಮಗಾರಿಗಳನ್ನು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಬಂದಿರುವುದಿಲ್ಲ.<br>ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ (ಕೆ.ಪಿ.ಪಿ) ನಲ್ಲಿ ನಿಯಮಾವಳಿಯಂತೆ ಗುತ್ತಿಗೆ ಟೆಂಡರ್ ಆಹ್ವಾನಿಸಿ ಕಾಮಗಾರಿಯ ಗುತ್ತಿಗೆ ವಹಿಸಲಾಗುತ್ತಿದೆ. |
| ಈ) | ಗೃಹ ಮಂಡಳಿಯಿಂದ ಸಾಕಷ್ಟು ಗೃಹಗಳನ್ನು ನಿರ್ಮಾಣ ಮಾಡುವ ಕಾಮಗಾರಿಗಳು ಬಾಕಿ ಇರುವಾಗ, ಬೇರೆ ಬೇರೆ ಕಡೆಗಳಲ್ಲಿ ಕಾಮಗಾರಿಗಳ ಕೆಲಸವನ್ನು ಗುತ್ತಿಗೆ ಪಡೆಯುವುದು ಇದು ಸಮಂಜಸವೇ ? | ಪ್ರಸ್ತುತ, ಕರ್ನಾಟಕ ಗೃಹ ಮಂಡಳಿಯಲ್ಲಿ ಯಾವುದೇ ವಸತಿ ಗೃಹ ಮಂಡಳಿಯಲ್ಲಿ ಸಾಕಷ್ಟು ತಾಂತ್ರಿಕ ಸಿಬ್ಬಂದಿ ಇರುವುದರಿಂದ ಹಾಗೂ ಮಂಡಳಿಯ ಕಾಯ್ದೆಯಲ್ಲಿ ಬೇರೆ ಬೇರೆ ಇಲಾಖೆಯ ಕಾಮಗಾರಿಗಳನ್ನು ಕೈಗೊಳ್ಳಲು ಸಹ ಅವಕಾಶವಿರುವುದರಿಂದ ಬೇರೆ ಬೇರೆ ಇಲಾಖೆಯ ಕಾಮಗಾರಿಗಳನ್ನು ಸಹ ಗೃಹ ಮಂಡಳಿಯಿಂದ ಕೈಗೊಳ್ಳಲಾಗುತ್ತಿದೆ. ಇರುವುದಿಲ್ಲ. ಸಾರ್ವಜನಿಕರ ಬೇಡಿಕೆ ಆಧಾರದ ಮೇಲೆ ಹಾಗೂ ಜಮೀನಿನ ಲಭ್ಯತೆಯ ಆಧಾರದ ಮೇಲೆ ವಸತಿ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ :ವಇ 258 ಕೆಹೆಚ್‌ಬಿ 2024

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು